## ವಂಶವಾಹಿ ಕಾಯಿಲೆ ಪತ್ತೆ

ಇತ್ತೀಚಿನ ದಿನಗಳಲ್ಲಿ ವ್ಯಕ್ತಿಯ ಜೀನ್‌ಗಳಲ್ಲಿ ಸಂಭವಿಸುವ 'ಮ್ಯುಟೇಷನ್'ನಿಂದ ವಿರಳ ಕಾಯಿಲೆಗಳು ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತಿವೆ. ಕೆಲವು ವರ್ಷಗಳ ಹಿಂದೆ ವಂಶವಾಹಿ ಕಾಯಿಲೆಗಳಿಗೆ ಕಾರಣಗಳನ್ನು ಪತ್ತೆ ಹಚ್ಚುವುದು ಸುಲಭವಿರಲಿಲ್ಲ. ಆದರೆ, ಈಗ ವಿರಳ ಕಾಯಿಲೆಗಳಿಗೆ ಕಾರಣಗಳನ್ನು ತ್ವರಿತವಾಗಿ ಪತ್ತೆ ಮಾಡುವ ತಂತ್ರಜ್ಞಾನ ಇದೀಗ ಲಭ್ಯವಿದೆ.

ವಂಶವಾಹಿ ಪರೀಕ್ಷೆಯ ಬಗ್ಗೆ ವೈದ್ಯರಲ್ಲಿ ಅರಿವಿನ ಕೊರತೆ ಇದೆ. ಬಹಳಷ್ಟು ಕಾಯಿಲೆಗಳು ವಂಶವಾಹಿ ಸಂಬಂಧಿತವಾಗಿರುತ್ತವೆ. ವಂಶವಾಹಿ ಪರೀಕ್ಷೆ ಮತ್ತು ಅದರ ವರದಿಯನ್ನು ಕೆಲವೇ ವಾರಗಳಲ್ಲಿ ಪಡೆಯಬಹುದು. ಹಿಂದೆ ಅದಕ್ಕೆ 2 ರಿಂದ 3 ವರ್ಷಗಳು ಬೇಕಾಗುತ್ತಿತ್ತು.

ಕ್ಯಾನ್ಸರ್‌ನಲ್ಲಿ ಶೇ 50 ರಷ್ಟು ಪ್ರಕರಣಗಳು ವಂಶವಾಹಿಯೇ ಕಾರಣವಾಗಿರುತ್ತದೆ. ಅಧಿಕ ರಕ್ತದೊತ್ತಡಕ್ಕೂ ವಂಶವಾಹಿಗೂ ಸಂಬಂಧವಿದೆ. ಇದಲ್ಲದೆ ವಿರಳ ಕಾಯಿಲೆಗಳಾದ ಕುಸುಮ ರೋಗ, ತಲಸ್ಸೇಮಿಯಾ, ಸಿಸ್ಟಿಕ್ ಫೈಬ್ರೋಸಿಸ್ ಮುಂತಾದವುಗಳಿಗೆ ಕಾರಣಗಳನ್ನು ವಂಶವಾಹಿ ಪರೀಕ್ಷೆಯ ಮೂಲಕ ತಿಳಿದುಕೊಳ್ಳಬಹುದು ಎಂದು ಹೇಳುತ್ತಾರೆ ಡಾ.ಬಿ.ವಿ. ರವಿಕುಮಾರ್.

**ಆನುವಂಶೀಯವಾಗಿಯೂ ಬರುವ ಕ್ಷಯ, ರೋಗಿ ಮಾತ್ರವಲ್ಲದೆ ಆತನ ಮನೆಯವರ ಬದುಕನ್ನೂ ಅಲ್ಲೋಲಕಲ್ಲೋಲವಾಗಿಸುತ್ತದೆ. ದೀರ್ಘಕಾಲದ ರೋಗ ಕ್ಷಯ. ಇದನ್ನು ಸುಲಭದಲ್ಲಿ ಹಾಗೂ ಅತ್ಯಂತ ಬೇಗನೆ ಪತ್ತೆ ಹಚ್ಚುವ ಡಿಎನ್‌ಎ ಪರೀಕ್ಷೆಯ ಹೊಸ ವೈದ್ಯಕೀಯ ವಿಧಾನ ಬಂದಿದ್ದು, ಕ್ಷಯರೋಗಿಗಳಿಗೆ ವರದಾನವಾಗಿದೆ.**

**■ ಉಮಾ ಅನಂತ್**



ಪರೀಕ್ಷೆ ಕ್ಷಯರೋಗಿಗಳಿಗೊಂದು ವರದಾನ.

'ಕ್ಷಯರೋಗದ ಸೋಂಕು ಪೀಡಿತರಿಗೆ ಈ ನಿರ್ದಿಷ್ಟ ಪರೀಕ್ಷೆ ನಿಖರ ಫಲಿತಾಂಶಗಳನ್ನು ನೀಡುವುದಲ್ಲದೆ ಕ್ಷಯ ರೋಗದ ಚಿಕಿತ್ಸೆಯಲ್ಲಿ ಸಾಕಷ್ಟು ಸಮಯ ಉಳಿಸುತ್ತದೆ. ಕ್ಷಯವನ್ನು ಪರಿಣಾಮಕಾರಿಯಾಗಿ ಹಾಗೂ ವೇಗವಾಗಿ ನಿಯಂತ್ರಿಸುವ ಸಲುವಾಗಿ ಇಂದು ಹಲವಾರು ವರ್ಷಗಳಿಂದ ಕ್ಷಯದಿಂದ ಬಳಲುವವರಿಗೂ ಅನುಕೂಲ ಮಾಡಿ ಕೊಡುವ ಗುರಿ ಹೊಂದಿದ್ದೇವೆ' ಎಂದು ಹೇಳುತ್ತಾರೆ ಮೆಡ್‌ಜಿನೋಮ್ ಕೇಂದ್ರದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ವಿ.ಎಲ್‌ಆರ್. ರಾಮ್ ಪ್ರಸಾದ್.

'ಕ್ಷಯರೋಗದ ಸೋಂಕು ತೀವ್ರವಾಗಿದ್ದು ಸೂಕ್ತ ಸಮಯದಲ್ಲಿ ಸರಿಯಾದ ಚಿಕಿತ್ಸೆ ಪಡೆಯದೇ ಇದ್ದರೆ ರೋಗ ಉಲ್ಬಣವಾಗುತ್ತದೆ. ಪರಿಣಾಮ ಶ್ವಾಸಕೋಶ, ಕಿಡ್ನಿಗಳು ಹಾನಿಗೊಳಗಾಗಿ ಸುಮಾರು 72 ಗಂಟೆಗೊಳಗಾಗಿ ರೋಗಿ ಸಾವನ್ನಪ್ಪುವ ಅಪಾಯವೂ ಇದೆ' ಎಂದು ಎಚ್ಚರಿಕೆ ನೀಡುತ್ತಾರೆ ತಜ್ಞ ವೈದ್ಯರಾದ ಡಾ.ಬಿ.ವಿ. ರವಿಕುಮಾರ್.

'ನಮ್ಮ ದೇಹದೊಳಗೆ ಸೋಂಕು ಹೇಗೆ ಸೇರಿಕೊಳ್ಳುತ್ತದೆ ಎಂದು ವಿವರಿಸುವ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿರುವ ನ್ಯೂರೋವೈರಾಲಜಿ ವಿಭಾಗದ ಪ್ರೊಫೆಸರ್ ಡಾ.ವಿ. ರವಿ ಅವರು, ಈ ಸೋಂಕುಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಜೆನೆಟಿಕ್ಸ್ ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕು. ಇದಕ್ಕೆ ಸೂಕ್ತವಾದ ತಜ್ಞರು ಹಾಗೂ ಪರಿಣಾಮಕಾರಿಯಾದ ತಂತ್ರಜ್ಞಾನದ ಅಗತ್ಯವೂ ಇದೆ' ಎಂದು ಹೇಳುತ್ತಾರೆ.

### ತ್ವರಿತ ಚಿಕಿತ್ಸೆ ಅನಿವಾರ್ಯ

'ಕ್ಷಯ ರೋಗ ಬೇಗ ಪತ್ತೆಯಾಗದಿದ್ದರೆ, ಮೆದುಳು, ಕಣ್ಣು ಬೇಗನೆ ಹಾನಿಗೆ ಒಳಗಾಗುತ್ತದೆ. ಇದರಿಂದ ರೋಗಿ ಜೀವ ಕಳೆದುಕೊಳ್ಳಬಹುದು ಅಥವಾ ಶಾಶ್ವತ ಅಂಗವೈಕಲ್ಯಕ್ಕೆ ಒಳಗಾಗಬಹುದು. ಇದನ್ನು ತಪ್ಪಿಸಬೇಕಾದರೆ ರೋಗವನ್ನು ಬೇಗ ಪತ್ತೆ ಹಚ್ಚುವುದು ಅನಿವಾರ್ಯ. ಇದಕ್ಕಾಗಿ ಹೊಸ ತಂತ್ರಜ್ಞಾನ ನೆರವಾಗಲಿದೆ' ಎಂದು ಹೇಳುತ್ತಾರೆ ಮುಂಬಯಿಯ ಪಿ.ಡಿ. ಹಿಂದೂಜಾ ಆಸ್ಪತ್ರೆಯಲ್ಲಿ ತಜ್ಞ ವೈದ್ಯೆಯಾಗಿರುವ ಡಾ.ಕ್ಯಾಮಿಲಾ ರೋಡ್ರಿಗಸ್.

'ವಿಶ್ವ ಆರೋಗ್ಯ ಸಂಸ್ಥೆಯ ವರದಿಯ ಪ್ರಕಾರ 2017ರಲ್ಲಿ 2.7 ದಶಲಕ್ಷ ಕ್ಷಯರೋಗ ಪ್ರಕರಣಗಳು ವರದಿಯಾಗಿತ್ತು. ಕ್ಷಯರೋಗ ಸಂಬಂಧಿ ಮರಣ ಪ್ರಮಾಣದಲ್ಲಿ ಭಾರತವು ಜಾಗತಿಕ ಮಟ್ಟದಲ್ಲಿ ಶೇ. 27ರಷ್ಟು ಪ್ರಮಾಣವನ್ನು ಹೊಂದಿದೆ. ಇದು ಆತಂಕದ ವಿಚಾರ' ಎನ್ನುತ್ತಾರೆ ಡಾ. ಕ್ಯಾಮಿಲಾ.

'ಒಂದು ಅಂದಾಜಿನ ಪ್ರಕಾರ ಸೋಂಕಿನಿಂದ ಬರುವ ರೋಗಿಗಳ ಪೈಕಿ ಕ್ಷಯರೋಗ ಅಪಾಯಕಾರಿಯಾಗಿದ್ದು ಇದರಿಂದ ಸಾಯಿವವರ ಸಂಖ್ಯೆಯೂ ಹೆಚ್ಚುತ್ತಿದೆ. ಇದಕ್ಕೆ ಪ್ರಮುಖ ಕಾರಣ ಡಯಗ್ನಾಸ್ಟಿಕ್ ಲ್ಯಾಬೋರೇಟರಿಗಳು ಸೋಂಕು ಪತ್ತೆ ಹಚ್ಚುವಲ್ಲಿ ಅಷ್ಟು ಪರಿಣಾಮಕಾರಿಯಾಗದೇ ಇರುವುದು. ಇದಕ್ಕಾಗಿಯೇ ಮೆಡ್‌ಜಿನೋಮ್ ಅತ್ಯಾಧುನಿಕ ತಂತ್ರಜ್ಞಾನವಿರುವ ಕ್ಷಯರೋಗ ಪತ್ತೆ ಸಾಧನವನ್ನು ಕಂಡುಹಿಡಿದಿದ್ದು, ಸ್ಟಿಟ್ ಎಸ್‌ಇಕ್ಯು ಕ್ಷಯರೋಗಿಗಳಿಗೆ ವರದಾನ' ಎಂಬುದು ಈ ವೈದ್ಯೆಯ ಅಭಿಪ್ರಾಯ. ■